**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 69/2014
ಪಿಡಬ್ಲು :1 ಸಿಡಬ್ಲು :4

| | |
|---|---|
| ಸಾಕ್ಷಿಯ ಹೆಸರು | : ಶ್ರೀ. ಪ್ರಕಾಶ ದೊಂಡಿಬಾ ಶೇರಕಾನೆ |
| ತಂದೆಯ ಹೆಸರು | : ಶ್ರೀ. ದೊಂಡಿಬಾ ಶೇರಕಾನೆ |
| ವಯಸ್ಸು | : 42 ವರ್ಷ |
| ಉದ್ಯೋಗ | : ಒಕ್ಕಲುತನ |
| ವಾಸ್ತವ್ಯ | : ನವಲಿಹಾಳ |
| ದಿನಾಂಕ | : 30-10-2024 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

## EBC ದೋಷಾರೋಪಣೆ ಹೊರಿಸುವ ಮುಂಚೆ ಸಾಕ್ಷಿದಾರರ ಮುಖ್ಯ ವಿಚಾರಣೆ

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಪಿರ್ಯಾದಿ ನನ್ನ ಅಣ್ಣ ಆಗಿದ್ದು, ಆತನು ಈಗ ನಾಲ್ಕೂವರೆ ವರ್ಷಗಳ ಹಿಂದೆ ಅನಾರೋಗ್ಯದಿಂದಾಗಿ ಮೃತಪಟ್ಟಿರುತ್ತಾನೆ. ಸಾಕ್ಷಿ ನಂಬರ 2 ಶೋಭಾ ನನ್ನ ತಂಗಿ. ಸಾಕ್ಷಿ ನಂಬರ 3 ಮಂಜುಳಾ ನನ್ನ ತಾಯಿ. ಈ ಪ್ರಕರಣದ ಎಲ್ಲಾ ಆರೋಪಿತರು ಪರಿಚಯ. ನನ್ನದು ಹಿಂದೂ ಡೋರ ಜಾತಿಯಾಗಿರುತ್ತದೆ. ಸದರಿ ಹಿಂದೂ ಡೋರ ಜಾತಿ ಪರಿಶಿಷ್ಟ ಜಾತಿ ಅಡಿಯಲ್ಲಿ ಬರುತ್ತದೆ. ಈ ಪ್ರಕರಣದ 1, 2, 6 ಮತ್ತು 7 ಆರೋಪಿತರು ಹಿಂದೂ ಕುರುಬರ ಜಾತಿಯವರಾಗಿರುತ್ತಾರೆ. ಈ ಪ್ರಕರಣದ 3 ರಿಂದ 5 ನೇ ಆರೋಪಿತರು ಹಿಂದೂ ಲಿಂಗಾಯತ ಜಾತಿಯವರಾಗಿರುತ್ತಾರೆ. ನಮ್ಮ ಮನೆಯು ಕವಲುಗುಡ್ಡ ಗ್ರಾಮದ ಸರ್ವೇ ನಂಬರ ಜಮೀನಿನಲ್ಲಿ ಇರುತ್ತದೆ. ಸದರಿ ಮನೆಯಲ್ಲಿ ನನ್ನ ಕುಟುಂಬ, ನನ್ನ ಅಣ್ಣನ ಕುಟುಂಬ ಹಾಗೂ ನನ್ನ ತಂಗಿ ಮತ್ತು ತಾಯಿ ಒಟ್ಟಾಗಿ ವಾಸವಾಗಿದ್ದೇವು. ದಿಃ 15.06.2012 ರಂದು ಸಂಜೆ 4 ಗಂಟೆ ಸುಮಾರಿಗೆ ನಾನು ನನ್ನ ತಾಯಿ, ಅಣ್ಣಾ, ತಂಗಿ ಎಲ್ಲರೂ ನವಳಿಹಾಳದಲ್ಲಿರುವ ನಮ್ಮ ತೋಟದ ಮನೆಯಲ್ಲಿ ಇದ್ದೆವು. ಅಲ್ಲಿಗೆ ಸೈದು ಬಂಡಗಾರ, ಮಹಾದೇವ ಬಂಡಗಾರ, ಭೀಮಗೌಂಡ ಗಾಳಿ , ರಮೇಶ ತೇಳಿ , ಮಲ್ಲಿಕಾರ್ಜುನ ಗಾಳಿ, ಭಾರತಿ ಬಂಡಗಾರವರು ನಮ್ಮ ಹೊಲಕ್ಕೆ ಬಂದು ನಮ್ಮ ಗೌಡರ ಮೇಲೆ ಯಾಕೆ ಕೇಸು

**ಹಾಕುತ್ತಿರಿ ನೀವು ಕೀಳಜಾತಿಯವರು ಸೂಳೆ ಮಕ್ಕಳಿರಾ ಎಂದು , ಗೌಡರು ಹೇಳಿದ ಹಾಗೇ ಕೇಳಬೇಕು ಇಲ್ಲದಿದ್ದರೆ ನಿಮ್ಮನ್ನು ಕೊಲ್ಲುತ್ತೆವೆ ಎಂದೆಲ್ಲಾ ಹೇಳಿ ಬಡಿಯಲು ಪ್ರಾರಂಬಿಸಿದರು. ನಮ್ಮ ತಾಯಿ ಬಿಡಿಸಲು ಹೋದಾಗ ಬೀಮಗೌಂಡ ಗಾಳಿ ನಮ್ಮ ತಾಯಿಯ ಸೀರೆ , ಜೂಟ್ಟು ಹಿಡಿದು ಎಳದಾಡಿದರು. ಆಗ ನನ್ನ ತಂಗಿ ಹೋಗಿ ಬಿಡಿಸದಳು. ನನಗೂ ಮತ್ತು ನನ್ನ ಅಣ್ಣನಿಗೂ ಕೋಡಲಿ ಕುಡಗೋಲ ಹಿಡಿದುಕೊಂಡು ಬೆನ್ನು ಹತ್ತಿದರು. ನಾವು ಪೋಲಿಸ ಠಾಣೆಗೆ ಹೋದೆವು. ಆಗ ಪಿಎಸ್ಐ ರವರು ನಮಗೆ ಹೇಳಿ ಹೋಗಿದ್ದಾರೆ , ಅವರು ಹೇಳಿದ ಹಾಗೆ ನೀವು ಕೇಳಬೇಕು , ನೀವು ಕೀಳಜಾತಿಯವರಿದ್ದಿರಿ ಎಂದೆಲ್ಲಾ ಹೇಳಿ ನಮಗೆ ಬೆದರಿಕೆ ಹಾಕಿದರು, ನಿಮ್ಮ ಪಿರ್ಯಾದನ್ನು ಪಡೆಯುವುದಿಲ್ಲ. ನಾನೇ ಅವರಿಗೆ ಹೇಳಿ ಕಳುಹಿಸಿದ್ದೆನೆ, ನೀವೆನಾದರೂ ಎಸ್.ಪಿ.ಯವರ ಹತ್ತಿರ ಹೋದರೆ ನಿಮ್ಮನ್ನು ಕೊಂದು ಹಾಕಿಸುತ್ತೆನೆಂದು ನಮಗೆ ಬೈದರು.**

ಆರೋಪಿತರ ವಿರುದ್ಧ ಪೋಲಿಸ ಠಾಣೆಗೆ ದೂರು ಕೊಡಲು ಹೋಗಿದ್ದು, ಸದರಿಯವರು ನಮ್ಮ ದೂರನ್ನು ಸ್ವೀಕರಿಸದೇ ನೀವು ಚೆನ್ನಬಸಪ್ಪ ಗಾಳಿ ಇತನ ಮೇಲೆ ಕೇಸ ಹಾಕಿದ್ದನ್ನು ಹಿಂದಕ್ಕೆ ತೆಗೆದುಕೊಳ್ಳಿ ಇಲ್ಲ ಅಂದರೆ ಅವರು ನಿಮ್ಮನ್ನು ಬಿಡುವುದಿಲ್ಲ, ಸದರಿಯವರು ರಾಜಕೀಯದವರು ಇರುತ್ತಾರೆ ಎಂದು ಹೇಳಿದರು. ನಂತರ ಎಸ್.ಪಿ ಬೆಳಗಾವಿರವರ ಹತ್ತಿರ ದೂರು ಕೊಡಲು ಹೋಗಿದ್ದು, ಸದರಿಯವರೂ ಸಹ ದೂರನ್ನು ಸ್ವೀಕರಿಸಿರುವುದಿಲ್ಲ. ಆದ ಕಾರಣ ನನ್ನ ಅಣ್ಣ ಈ ನ್ಯಾಯಾಲಯದ ಮುಂದೆ ಬಂದು ಖಾಸಗಿ ದೂರನ್ನು ದಾಖಲು ಮಾಡಿರುತ್ತಾರೆ.

ನಾವು ಡೋರ ಜಾತಿಗೆ ಸೇರಿದವರೆಂದು ಈ ಪ್ರಕರಣದ ಆರೋಪಿತರೆಲ್ಲರಿಗೂ ಗೊತ್ತಿರುತ್ತದೆ. ಸದರಿ ಆರೋಪಿತರನ್ನು ನೋಡಿದರೆ ಗುರುತಿಸಬಲ್ಲೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಚೆನ್ನಪ್ಪ ಗೌಡ)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.